ಟಿ.ಎಂ. ಮಾನಪ್ಪ, ಶಿವಮೊಗ್ಗ

ಹಾವು ಪ್ರಾಣಿ ಜಾತಿಗೆ ಸೇರಿದರೂ ಮೊಟ್ಟೆ ಇಡುವುದೇಕೆ?



ರಂಪ ಮಾಡುವ ಮರಿಗಳಿಗಿಂತ ತೆಪ್ಪಗೆ ಮೂಲೆಯಲ್ಲಿ ಕೂರುವ ಮೊಟ್ಟೆ ವಾಸಿ.

ಗಣೇಶ ಎಂ. ಪೈ, ಬೆಂಗಳೂರು

ವಕೀಲರು ಕಕ್ಷಿಯ ಕೇಸ್ ಫೈಲ್ಸ್ ಖುಲ್ಲಂಖುಲ್ಲಾ ಹಿಡಿದು ಓಡಾಡಿ, ಅವು ನೆನೆದರೆ, ಹಾಳಾದರೆ ಕಕ್ಷಿದಾರನ ಗತಿ?

ಸಾಕ್ಷಿಗಳೆಲ್ಲ ಸಾಯುವವರೆಗೆ ಕೇಸ್ ಎಳೆದು ಕಕ್ಷಿಯನ್ನು ಬದುಕಿಸುವರಂತೆ.

ಎಚ್.ಕೆ. ವಿಜಯಕುಮಾರ್, ರಾಯಚೂರು

ಆಗಿನ ಉತ್ತರಭೂಪನಿಗೂ, ಈಗಿನ ರಾಮ್‌ಗೂ ಏನು ವ್ಯತ್ಯಾಸ?

ಉತ್ತರಭೂಪ ಈ ಅಂಕಣಕ್ಕೆ ಜನಕ; ರಾಮ್ ಸದ್ಯದ ಅಮ್ಲ ಜನಕ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮನುಷ್ಯನಿಗೆ ನಂಬಿಕೆ ಮುಖ್ಯವೋ, ಪ್ರೀತಿ ಮುಖ್ಯವೋ ಸಾರ್?



ಪ್ರೀತಿಸುವವರಲ್ಲಿ ನಂಬಿಕೆ ಮುಖ್ಯ.

ಪಿ. ಜಯವಂತ ಪೈ, ಕುಂದಾಪುರ

ಜೈಲಿಂದ ಹೊರಬಂದ ರಾಜಕಾರಣಿಗಳಿಗೆ ಮೆರವಣಿಗೆ ಮಾಡುವುದೇಕೆ?

ಇರುವೆಗಳು ಸತ್ತ ಕೀಟಗಳನ್ನು ಬೆನ್ನಮೇಲೆ ಹೊತ್ತೊಯ್ಯುತ್ತವಲ್ಲಾ, ಇದೂ ಹಾಗೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಬಂಧುಮಿತ್ರರು ಹತ್ತಿರ ಆಗುವುದು ಯಾವಾಗ ಸಾರ್?

ಹತ್ತಿರದವರಿಗೆಲ್ಲ ಹೇಳಿಕಳಿಸಿಬಿಡಿ ಎಂದು ವೈದ್ಯರು ಗಂಭೀರವಾಗಿ ನುಡಿದಾಗ.

ಮಹಾವೀರ ಕಾಸರ, ಶಿವಮೊಗ್ಗ

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಯಾವ ಅರ್ಥದಲ್ಲಿ ಪ್ರಭುಗಳು?

ದೊರೆ ಎಂದರೆ ಏನೇನೂ ದೊರೆಯದವನು ಎಂಬ ಸ್ವಾತಂತ್ರ್ಯಾನಂತರದ ಅರ್ಥದಲ್ಲಿ.

ವಿ. ಹೇಮಂತಕುಮಾರ್, ಬೆಂಗಳೂರು

ನಾಚಿಕೊಂಡಾಗ ಹೆಣ್ಣಿನ ಕೆನ್ನೆ ಕೆಂಪಾಗುವುದೇಕೆ ಸಾರ್?

ನಿಲ್ಲು. ಜಾಗ್ರತೆಯಿಂದ ಮುಂದುವರಿ ಎಂದು ಸೂಚಿಸುವ ನೈಸರ್ಗಿಕ ರೆಡ್ ಸಿಗ್ನಲ್ ಅದು.

ಜಯಂತಿ ಶ್ಯಾನ್‌ಭಾಗ್, ಮೈಸೂರು

ಮನೆಗೆ ವಾಸ್ತುವೋ ಅಥವಾ ಮನೆಯಲ್ಲಿ ವಾಸಿಸುವವರ ಮನಸ್ಸುಗಳಿಗೆ ವಾಸ್ತುವೋ?

ಎರಡಕ್ಕೂ ಅನಗತ್ಯ. ವಾಸ್ತು ಅಧೀರರನ್ನು ಬೆದರಿಸುವ ವ್ಯಾಪಾರವಷ್ಟೆ.

ರತ್ನಾ ರಾಜ್‌ಕುಮಾರ್, ಹಾಸನ

ತೊದಲುನುಡಿಗಳನ್ನಾಡುವ ಮಕ್ಕಳು ಸದಾ ನಮ್ಮೊಂದಿಗಿದ್ದರೆ ಎಂಬ ಕಲ್ಪನೆಯೇ ಖುಷಿ ಕೊಡುವುದಲ್ಲ ಸಾರ್...?

ಗಂಡ ರಾತ್ರಿ ಬಂದು ತೊದಲಿದರೆ ಮಾತ್ರ ರಂಪ! ಶುದ್ಧ ಪಕ್ಷಪಾತವಿದು.

ಶಿವಮೊಗ್ಗ ರಮೇಶ್, ಮೈಸೂರು

ಇಂದಿನ ರಾಜಕಾರಣದಲ್ಲಿ ವಿದುರ ನೀತಿ ಹೇಳುವ ಒಬ್ಬ ರಾಜಕಾರಣಿಯೂ ಇಲ್ಲವೇ?

ಹ್ಞ! ಅದಕ್ಕೆ ಉದ್ಯೋಗಪರ್ವದ ಅರಿವಿರಬೇಕು; ಇವರದ್ದೆಲ್ಲ ಕೇವಲ ಉದ್ವೇಗ ಪರ್ವ.

ಸುನೀತಾ ಬಾನಿ, ಬೆಂಗಳೂರು

ಅಜ್ಞಾತವಾಸ ಎನ್ನುವುದು ಈಗಿನ ಕ್ವಾರಂಟೈನ್‌ಗಿಂತ ವಾಸಿ ಅಲ್ಲವಾ ರಾಮ್?

ದಾಸಿಯಾಗಿ ಬಲಾತ್ಕಾರಕ್ಕೊಳಗಾಗುವುದಕ್ಕಿಂತ ಸ್ವತಿಕೆ ಉಳಿಸಿಕೊಳ್ಳುವ ಕ್ವಾರೆಂಟೈನೇ ವಾಸಿ.

ಆರ್. ಮಧುಸೂದನ್, ಹಾಸನ

ಮಂಡೋದರಿಯ ಪಾತಿವ್ರತ್ಯ ಸೀತೆಯನ್ನು ಮೋಹಿಸದಂತೆ ರಾವಣನನ್ನು ಏಕೆ ತಡೆಯಲಿಲ್ಲ?

ಆ ಹೊತ್ತಿಗೆ ರಾವಣ ಮಂಡೋದರಿಯ ಪಾತಿಯನ್ನು ಮೀರಿ ಬೆಳೆದುಬಿಟ್ಟಿದ್ದ.

## ಬಹುಮಾನಿತ ಪ್ರಶ್ನೆ

ರಾಮಕೃಷ್ಣಾರೆಡ್ಡಿ, ಬೆಂಗಳೂರು

ಹೆಂಡತಿಯನ್ನು ನಗಿಸಬೇಕೆಂದುಕೊಂಡಿರುವೆ. ಏನು ಮಾಡಲಿ?

ಆಫೀಸಿನಲ್ಲಿ ಬಾಸ್ ನಿಮ್ಮನ್ನು ಬುದ್ಧಿವಂತರೆಂದು ಹೇಳಿದರು ಎಂದು ಹೆಂಡತಿಗೆ ಹೇಳಿ.

ಪಿ.ಜೆ. ರಾಘವೇಂದ್ರ, ಮೈಸೂರು

ಪಟಾಕಿ ಸುಟ್ಟರೆ ಸಂಭ್ರಮ, ಟೈರ್ ಸುಟ್ಟರೆ?

ನ್ಯೂಸ್ ಕವರೇಜ್‌ಗೆ ಒಳ್ಳೆಯ ಮೈಲೇಜ್.

ಫಾಲನೇತ್ರ ಸಜ್ಜನ, ಶಿರಸಿ

ದೇವರ ಹೆಸರಿನ ಹಿಂದಿರುವ ಗೌರವಾರ್ಥ ಪದ 'ಶ್ರೀ' ಅನ್ನು 'ಡಾ' ಪದವಿಯವರು ತೊರೆಯುವುದೇಕೆ?

ಆ ಎರಡು ಸಮಾನಾಂತರ ರೇಖೆಗಳು ಅವರಿಗೆ ಸಮರಾರಿಲ್ಲ ಎಂದು ಸೂಚಿಸುವುದರಿಂದ.

ಬಿ. ಚಂದ್ರೇಗೌಡ, ಬೆಂಗಳೂರು

ಪುಸ್ತಕಕ್ಕೂ, ಮಸ್ತಕಕ್ಕೂ ಏನು ಸಂಬಂಧ?



ಪಠ್ಯಪುಸ್ತಕಗಳಂತೂ ಹಲವಾರು ವಿದ್ಯಾರ್ಥಿಗಳ ಅತ್ಯುತ್ತಮ ತಲೆದಿಂಬುಗಳಾಗಿವೆ.

ರಮೇಶ್, ಹನುಮನಾಳು

ಕೇಡುಗಾಲಕ್ಕೆ ನಾಯಿ ಮೊಟ್ಟೆ ಹಾಕಿತಂತೆ. ಆದರೆ ಕೋಳಿ, ಬಾತುಕೋಳಿ ಹಾಕುವ ಮೊಟ್ಟೆ?

ಹಾಕಿದ ಕ್ಷಣದಿಂದಲೇ ಮೊಟ್ಟೆಗಳಿಗೆ ಕೇಡುಗಾಲ ಆರಂಭವಾಯಿತಂತೆ.

ಮನೋರಮಾ ಎಂ. ಪ್ರಭು, ಕಾಸರಕೋಡ

ಹಣದ ಕೊರತೆಯಾದರೆ ಸಾಲ ಕೇಳಬಹುದು. ಗುಣದ ಕೊರತೆಯಾದರೆ?

ಸಾಲ ತೀರಿಸುವುದನ್ನೇ ಮರೆಯಬಹುದು.

ಪ್ರಶ್ನೆಗಳನ್ನು ಕಳುಹಿಸಿ:
editorsu@sudha.co.in

■ ರಾಮ್